ಅನುದಾನದ ಬಗ್ಗೆ

188 ಶ್ರೀ ನರಸಿಂಹ ನಾಯಕ (ರಾಜ ಗೌಡ) (ಸುರಪುರ)

ಗೋವಿಂದ ಎಂ ಕಾರಜೋಳ(ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು)

ಅ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದಗಿನಿಂದಲೂ ಸರ್ಕಾರ ನೀಡಿರುವ ಒಟ್ಟು ಅನುದಾನ ಎಷ್ಟು?

1990-91 ರಿಂದ ಜೂನ್ 2009 ರ ವರೆಗೆ ಒಟ್ಟು 85240.82 ಲಕ್ಷಗಳ ಅನುದಾನ ಸರಕಾರ ಮಂಡಳಿಗೆ ನೀಡಿರುತ್ತದೆ.

ಆ) ಯಾವ ಕಾರ್ಯಕ್ರಮಗಳಿಗೆ ಅನುದಾನವನ್ನು ಬಳಸಿಕೊಳ್ಳಲಾಗಿದೆ?

ಮಂಡಳಿಯ ಮಾರ್ಗಸೂಚಿಗಳನುಸಾರ ಒಟ್ಟು ಅನುದಾನದ ಶೇಕಡ 40 ರಷ್ಟನ್ನು ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕಾಗಿ, ಶೇಕಡ 35 ರಷ್ಟನ್ನು ಸಾಮಾಜಿಕ ವಲಯಕ್ಕಾಗಿ ಮತ್ತು ಶೇಕಡ 25 ರಷ್ಟು ಭೂ ಅಂತರ್ಜಲ ಸಂರಕ್ಷಣೆಗಾಗಿ ಬಳಸಿಕೊಳ್ಳಲಾಗಿದೆ

ಇ) ಈವರೆವಿಗೂ ಒಟ್ಟು ಖರ್ಚಾಗಿರುವ ಅನುದಾನವೆಷ್ಟು?

ಪ್ರಾರಂಭದಿಂದ ಇದುವರೆಗೆ ಒಟ್ಟು ರೂ. 84470.33 ಲಕ್ಷಗಳು ಅನುದಾನ ಖರ್ಚಾಗಿರುತ್ತದೆ.

ಕೃಷ್ಣ ಭಾಗ್ಯ ಜಲ ನಿಗಮ

189ಶ್ರೀ ನರಸಿಂಹ ನಾಯಕ(ರಾಜ ಗೌಡ) (ಸುರಪುರ)

ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ಭಾಗ್ಯ ಜಲ ನಿಗಮ, ನಾರಾಯಣಪುರ ವಲಯ ಹಾಗೂ ಭೀಮರಾಯನಗುಡಿ ವಲಯದಲ್ಲಿರುವ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಸಹಾಯಕ ಕಾರ್ಯ ಪಾಲಕ ಅಭಿಯಂತರರ ಹುದ್ದೆ ಗಳೆಷ್ಟು;

ನಾರಾಯಣಪುರ ವಲಯದಲ್ಲಿ 4 ಕಾರ್ಯ ನಿರ್ವಾಹಕ ಅಭಿಯಂತರರ ಹುದ್ದೆಗಳು ಹಾಗೂ 14 ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳು ಇರುತ್ತವೆ.

ಭೀಮರಾಯನಗುಡಿ ವಲಯದಲ್ಲಿ 11 ಕಾರ್ಯ ನಿರ್ವಾಹಕ ಅಭಿಯಂತರರ ಹುದ್ದೆಗಳು ಹಾಗೂ 48 ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳು ಇರುತ್ತವೆ.

ಆ) ಎಷ್ಟು ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾರ್ಯ ನಿರ್ವಹಿಸುತ್ತಿದ್ದಾರೆ;